**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 77/2016</u>**
**<u>C/W</u>**
**<u>ಎಸ್.ಸಿ. ಸಂಖ್ಯೆಃ 84/2017</u>**
**<u>ಎಸ್.ಸಿ. ಸಂಖ್ಯೆಃ 90/2018</u>**
**<u>ಎಸ್.ಸಿ. ಸಂಖ್ಯೆಃ 20/2019</u>**
**<u>ಎಸ್.ಸಿ. ಸಂಖ್ಯೆಃ 51/2019</u>**

ದಿನಾಂಕಃ 09.09.2021
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ಚಾಸಾ - 6 ಪ್ರಾಸಾ - 6

| | | |
|---|---|---|
| ಹೆಸರು | ಃ | ಸಂತೋಷ್ |
| ತಂದೆಯ/ಗಂಡನ ಹೆಸರು | ಃ | ಶಿವಣ್ಣ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಸೀಗೆಕುಪ್ಪೆ |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ಈಗ ನನಗೆ ತೋರಿಸಿದ ದಾಖಲೆಯಲ್ಲಿ ನನ್ನ ರುಜು ಇದೆ. ಸದರಿ ರುಜುವನ್ನು ನಾನು ನಮ್ಮ ಊರಿನ ವಾಸಿಗೆ ಸಂಬಂಧಪಟ್ಟ ಕಂಪ್ಲೇಂಟ್ ಬಗ್ಗೆ ವಿಚಾರಿಸಲೆಂದು ಮಾಗಡಿ ಠಾಣೆಗೆ ಹೋದಾಗ ಈಗ ನಾನು ಒಪ್ಪಿಕೊಂಡ ರುಜುವನ್ನು ಪಡೆದಿರುತ್ತಾರೆ.

2. ನಾನು ಒಪ್ಪಿಕೊಂಡ ರುಜುವನ್ನು ಈಗ ನಿಶಾನೆ ಪಿ 6(ಬಿ) ಎಂದು ಗುರುತು ಮಾಡಲಾಯಿತು. ನಿಶಾನೆ ಪಿ 6 ರಲ್ಲಿ ಬರೆದಿರುವ ಒಕ್ಕಣೆಯ ಬಗ್ಗೆ ನನಗೆ ಗೊತ್ತಿಲ್ಲ.

3. ನಾನು ರುಜು ಮಾಡಿದಾಗ ಯಾವುದೇ ಶವ ಪ್ರಶ್ನಿಸಿದಂತೆ ಇರಲಿಲ್ಲ. ಅನಾಥ ಶವ ಕುರಿತಂತೆ ಪಂಚನಾಮೆ ಜರುಗಿಸಿದ್ದು, ಪಂಚನಾಮೆಯ ಕಾಲಕ್ಕೆ ಕೆಲ ವಸ್ತುಗಳನ್ನು ವಶಕ್ಕೆ ಪಡೆದಿದ್ದು, ಪರಿಣಾಮ ಬರವಣಿಗೆ ಮಾಡಿದ್ದು, ಆದ್ದರಿಂದ ಬರವಣಿಗೆಗೆ ರುಜು ಮಾಡಬೇಕೆಂದು ನನಗೆ ಸೂಚಿಸಿದ ಮೇರೆಗೆ ನಾನು ರುಜು ಮಾಡಿದ್ದೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**</u>

4. ದಿನಾಂಕ 16.05.2016 ರಂದು ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು, ತಿರುಮಲೆ ಗ್ರಾಮಕ್ಕೆ ಸೇರಿದ ಸರ್ಕಾರಿ ಗೋಮಾಳದ ಸರ್ವೇ ನಂ.48 ರಲ್ಲಿ ಬೆಂಗಳೂರು-ಮಾಗಡಿ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಇರುವ ಕಲ್ಲುಬಂಡೆಗಳ ಮಧ್ಯೆ ಬಿದ್ದಿದ್ದ ಸುಮಾರು 30 ವರ್ಷ ವಯಸ್ಸಿನ ಒಬ್ಬ ಅಪರಿಚಿತ ವ್ಯಕ್ತಿಯ ಲಾಶಿನ ಮೇಲೆ ನಡೆಸಿದ ಶವತನಿಖಾ ವರದಿಗೆ ಸಾಕ್ಷಿಯಾಗಿ ನಿಶಾನೆ ಪಿ 6 ರಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಶಾನೆ ಪಿ 6 ರಲ್ಲಿರುವ ಸಂಗತಿಗಳಿಗೆ ನಾನು ಪ್ರತ್ಯಕ್ಷ ಸಾಕ್ಷಿ ಎಂದರೆ ಸರಿಯಲ್ಲ.

5. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಇರುವುದಿಲ್ಲ.</u>**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.